

ಕಟ್ಟಬೇಕೆಂದಾದರೆ ಬದಲಾವಣೆಯ ದಿಕ್ಕು ನಿರ್ಧಾರವಾಗುವುದನ್ನು ತಡೆಯುವ ವಂಶಪಾರಂಪರ್ಯ ಆಳ್ವಿಕೆ, ಜಾತಿ, ಹಣ, ಸ್ಥಗಿತತೆ ಮತ್ತು ಒಂದೇ ಬಗೆಯ ಆಳ್ವಿಕೆ ಮುಂದುವರಿಯುವ ಪ್ರವೃತ್ತಿ... ಇವುಗಳನ್ನೆಲ್ಲಾ ಸೋಲಿಸಬೇಕು. ಬದಲಾವಣೆಯ ಗಾಳಿಯನ್ನು ಆಗ ಯಾವುದೂ ತಡೆಯಲಾರದು.'

ಬದಲಾವಣೆಯ ಗಾಳಿ ದೊಡ್ಡ ಮಟ್ಟದಲ್ಲೇ ಬೀಸಿತ್ತು. ಲೋಹಿಯಾ ಮುಂತಾದವರ ವಿರೋಧ ಪಕ್ಷಗಳ ರಾಜಕಾರಣ ಜನರಲ್ಲಿ ಹೊಸ ರಾಜಕೀಯ ಎಚ್ಚರ ಮೂಡಿಸಿತ್ತು. ಮತದಾನದ ಪ್ರಮಾಣ 61.1ಕ್ಕೆ ಏರಿತ್ತು; ಅದು ಆವರೆಗಿನ ಚುನಾವಣೆಗಳ ಅತಿಹೆಚ್ಚು ಪ್ರಮಾಣವಾಗಿತ್ತು.

1967ರ ಚುನಾವಣೆಯಲ್ಲಿ ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬಂದ ಸಮ್ಮಿಶ್ರ ಸರ್ಕಾರಗಳ ಬಗ್ಗೆ ಬಿಪಿನ್‌ಚಂದ್ರ, ಸಹ ಲೇಖಕರು ಕೊಡುವ ವಿವರಗಳು: 'ಪಂಜಾಬ್, ಬಿಹಾರ, ಉತ್ತರಪ್ರದೇಶಗಳ ರಾಜ್ಯ ಸರ್ಕಾರಗಳಲ್ಲಿ ಸ್ವತಂತ್ರ ಪಾರ್ಟಿ, ಜನಸಂಘ, ಭಾರತೀಯ ಕ್ರಾಂತಿ ದಳ, ಪ್ರಜಾಸಮಾಜವಾದಿ ಪಕ್ಷ, ಸಂಯುಕ್ತ ಸಮಾಜವಾದಿ ಪಕ್ಷ ಹಾಗೂ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಸೇರಿದ್ದವು. ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ಈ ಒಕ್ಕೂಟಗಳಲ್ಲಿ ಸೇರದಿದ್ದರೂ, ಈ ಒಕ್ಕೂಟಗಳನ್ನು ಬೆಂಬಲಿಸಿತ್ತು... ಕಾಂಗ್ರೆಸ್ ಕೂಡ ಕೆಲವು ರಾಜ್ಯಗಳಲ್ಲಿ ಸಮ್ಮಿಶ್ರ ಸರ್ಕಾರ ರಚಿಸಿತು.'

ವಿರೋಧ ಪಕ್ಷಗಳು ಅಧಿಕಾರಕ್ಕಾಗಿ ಒಟ್ಟಾಗಿದ್ದರೂ ತತ್ವ, ಸಿದ್ಧಾಂತಗಳ ದೃಷ್ಟಿಯಿಂದ ಹಲವೆಡೆ ವಿರುದ್ಧ ದಿಕ್ಕಿನಲ್ಲಿದ್ದವು. ಇದು ಲೋಹಿಯಾ ಅನುಭವಕ್ಕೂ ಬಂದಿತ್ತು. ಕನೌಜ್ ಕ್ಷೇತ್ರದಲ್ಲಿ ಜನಸಂಘ ತನ್ನನ್ನು ಸೋಲಿಸಲೆತ್ನಿಸಿತು ಎಂಬುದನ್ನೂ ಲೋಹಿಯಾ ನಂತರ ಸಂದರ್ಶನವೊಂದರಲ್ಲಿ ಹೇಳಿದರು. ಕಾಂಗ್ರೆಸ್ಸಿನ ವಿರೋಧವನ್ನೇ ಪ್ರಧಾನವಾಗಿಸಿಕೊಂಡಿದ್ದ ವಿರೋಧ ಪಕ್ಷಗಳಲ್ಲಿ ಪರಸ್ಪರ ವಿರುದ್ಧವಾದ ಸಿದ್ಧಾಂತಗಳಿದ್ದವು; ಆದರೂ ಹೊಂದಾಣಿಕೆ ಮಾಡಿಕೊಂಡಿದ್ದರ ಫಲವಾಗಿ ಆ ಘಟ್ಟದಲ್ಲಿ ಕೋಮುವಾದಿ ಶಕ್ತಿಗಳಿಗೆ ಬಲ ಬಂದಿತು ಎಂಬುದನ್ನೂ ಚರಿತ್ರೆ ದಾಖಲಿಸಿದೆ.

ಸಮಾಜವಾದಿಗಳ ದೃಷ್ಟಿಯಿಂದ ಈ ಸಲದ ಲೋಕಸಭೆ ಭಿನ್ನವಾಗಿತ್ತು. ಲೋಹಿಯಾ ಜೊತೆಗೆ ಜಾರ್ಜ್ ಫರ್ನಾಂಡಿಸ್, ಮಧು ಲಿಮಯೆ, ರಬಿರಾಯ್, ರಾಮ್‌ಸೇವಕ್ ಯಾದವ್ ಮೊದಲಾದವರು ಲೋಕಸಭೆ ಪ್ರವೇಶಿಸಿದ್ದರು. ಶಿವಮೊಗ್ಗದಿಂದ ಗೆದ್ದಿದ್ದ ಜೆ.ಎಚ್. ಪಟೇಲ್ ಸಮಾಜವಾದಿ ಪಕ್ಷದ ಆಶಯದಂತೆ ಲೋಕಸಭೆಯಲ್ಲಿ ಮೊದಲ ಬಾರಿಗೆ ಕನ್ನಡದಲ್ಲಿ ಮಾತಾಡಿ ಹೊಸ ಪರಂಪರೆ ಹುಟ್ಟು ಹಾಕಿದರು. ಮುಂದೆ ಪಟೇಲರು ತಮ್ಮ ಲೋಕಸಭಾ ಭಾಷಣದಲ್ಲಿ ಮಂಡಿಸಿದ ಸಮಾನತೆಯ ಆಶಯಗಳ ಬೇಡಿಕೆಗಳಲ್ಲಿ ಅಂತರ್ಜಾತೀಯ ವಿವಾಹಿತರಿಗೆ ವಿಶೇಷಾವಕಾಶ ಕುರಿತ ಒತ್ತಾಯವೂ ಇತ್ತು.

ಲೋಹಿಯಾ ಈ ಸಲ ಲೋಕಸಭೆ ಪ್ರವೇಶಿಸಿದಾಗ ಪರ್ಯಾಯ ರಾಜಕೀಯ ರೂಪುಗೊಳ್ಳುವ ಬಗ್ಗೆ ಹೆಚ್ಚಿನ ಆಶಾವಾದ ಅವರಲ್ಲಿತ್ತು. ಸರ್ಕಾರದ ವಿರುದ್ಧ ಅವರ ಯುದ್ಧ ಇನ್ನಷ್ಟು ತೀವ್ರವಾಯಿತು: 'ದೇಶದ ಸರ್ಕಾರವೇ ಸಂಪತ್ತನ್ನು ಸಂಗ್ರಹಿಸುವ ಹಾದಿ ಹಿಡಿದು ಸುಳ್ಳು ಹೇಳುತ್ತಿದ್ದರೆ, ಅದು ಜನರ ಹಸಿವಿನ ಸಮಸ್ಯೆಯನ್ನು ಎದುರಿಸಲಾರದು. ಯಾರು ಸತ್ಯ ಹೇಳುತ್ತಾರೋ, ಯಾರು ಸಂಪತ್ತಿನ ಸಂಗ್ರಹದ ಗೊಡವೆಗೆ ಹೋಗುವುದಿಲ್ಲವೋ, ಅವರು ಮಾತ್ರ ಹಸಿವನ್ನು ನಿರ್ಮೂಲನಗೊಳಿಸಬಲ್ಲರು.'

ಈ ಘಟ್ಟದಲ್ಲಿ ಲೋಹಿಯಾ ಲೋಕಸಭೆಯಲ್ಲಿ ಹಸಿವು, ಭ್ರಷ್ಟಾಚಾರ; ಚೀನಾ, ಪಾಕಿಸ್ತಾನಗಳ ಆಕ್ರಮಣ ಪ್ರವೃತ್ತಿ; ಅಂತರರಾಷ್ಟ್ರೀಯ ಸಂಬಂಧಗಳು; ವಿದ್ಯಾರ್ಥಿ ಚಳುವಳಿ; ಚರಿತ್ರೆಯ ಬರವಣಿಗೆ ಮುಂತಾದ ನೂರಾರು ವಿಷಯಗಳನ್ನು ಲೋಕಸಭೆಯಲ್ಲಿ ಗಂಭೀರವಾಗಿ ಚರ್ಚಿಸುವ ಮಾದರಿಗಳನ್ನು ರೂಪಿಸಿದರು. ಸಾಂಸ್ಕೃತಿಕ ಪ್ರಶ್ನೆಗಳನ್ನೂ ಎತ್ತಿದರು. ಕೇಂದ್ರ ಸಾಹಿತ್ಯ ಅಕಾಡೆಮಿಗೆ ಪ್ರಧಾನಮಂತ್ರಿ, ಮಂತ್ರಿಗಳು ಅಥವಾ ಸರ್ಕಾರದ ನಾಮನಿರ್ದೇಶಿತರು ಅಧ್ಯಕ್ಷರಾಗುವ, ಸದಸ್ಯರಾಗುವ ಪದ್ಧತಿಯನ್ನು ವಿರೋಧಿಸಿದರು. ಫ್ರಾನ್ಸ್‌ನ ಅಕಾಡೆಮಿಯ ಘನತೆಯನ್ನು ವಿವರಿಸಿದರು; ಚುನಾವಣೆಯ ಮೂಲಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರನ್ನು ಆರಿಸುವ ಪದ್ಧತಿಯನ್ನು ಜಾರಿಗೆ ತರಲು ಒತ್ತಾಯಿಸಿದರು. ಮುಂದೊಮ್ಮೆ ಸಾಹಿತ್ಯ ಅಕಾಡೆಮಿ ಸ್ವಾಯತ್ತವಾಗಿದ್ದರ ಹಿನ್ನೆಲೆಯಲ್ಲಿ ಲೋಹಿಯಾ ಒತ್ತಾಯವೂ ಇತ್ತು.

* * *

ಆ ಕಾಲಕ್ಕೆ ಸಮಾಜವಾದಿಗಳಿಗೂ, ಕಮ್ಯುನಿಸ್ಟರಿಗೂ ತಾತ್ವಿಕ ತಿಕ್ಕಾಟಗಳೂ, ವೈಯಕ್ತಿಕ ಜಗಳಗಳೂ ನಡೆಯುತ್ತಿದ್ದವು. 1966ರಲ್ಲಿ ಕಮ್ಯುನಿಸ್ಟ್ ನಾಯಕ ಎ.ಕೆ. ಗೋಪಾಲನ್ ಬಂಧನವಾಯಿತು. ರಮಾಮಿತ್ರ, ಪಿ.ಎನ್. ಲೇಖಿಯವರ ಜೊತೆಗೆ ಲೋಹಿಯಾ ಗೋಪಾಲನ್ ಅವರನ್ನು ನೋಡಲು ತಿಹಾರ್ ಜೈಲಿಗೆ ಹೋದರು. ಲೇಖಿ ಹೇಳಿದರು: 'ಮುಂದೆಂದಾದರೂ ಕಮ್ಯುನಿಸ್ಟ್ ಸರ್ಕಾರ ಬಂದು ನಿಮ್ಮನ್ನು ಜೈಲಿಗೆ ಹಾಕಿದರೆ ಗೋಪಾಲನ್ ನಿಮ್ಮನ್ನು